ಶ್ರೀ ಎಂ. ವೀರಪ್ಪ ಮೋಯಿಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ1993ನೇ ಸಾಲಿನ ಕರ್ನಾಟಕ ಜಿಲ್ಲಾ ಪರಿಷತ್ತುಗಳ ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿ ಸಮಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ''

(ಪ್ರಸ್ತಾವವನ್ನು ಮಂಡಿಸಲಾಯಿತು)

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ಇದು ಬರೀ ಮಂಡಲ ಪಂಚಾಯಿತಿಗಳ ಚುನಾಯಿತ ಸದಸ್ಯರುಗಳು ವಿಫಲರಾದರೆ ಆಡಳಿತ ಸಮಿತಿ ಅಥವಾ ಆಡಳಿತಗಾರರ ನೇಮಕಾತಿ ವಿಚಾರ ಇಷ್ಟೇ ಇದರಲ್ಲಿ ಇರತಕ್ಕಂಥದ್ದು. ಈ ಬಗ್ಗೆ ಈಗಾಗಲೇ ಆರ್ಡಿನೆನ್ಸ್‌ನ್ನು ಹೊರಡಿಸಿದ್ದೇವೆ. ಆಡಳಿತಾಧಿಕಾರಿಗಳದ್ದು ಅವಧಿ ಮುಗಿಯುವುದರಿಂದ ಅದಕ್ಕೆ ನಾವು ಮತ್ತೆ ಅದನ್ನು ಮುಂದುವರಿಸಬೇಕು ಎಂದು ಹೇಳಿ ನಾವು ಆರ್ಡಿನೆನ್ಸ್ ಹೊರಡಿಸಿದ್ದೇವೆ. ಅದನ್ನು ಆರ್ಡಿನೆನ್ಸ್ ಬಿಲ್ ಆಗಿ ಇವತ್ತು ಈ ಸದನದ ಮುಂದೆ ತರುತ್ತಿದ್ದೇನೆ. ಇದಕ್ಕೆ ಎಲ್ಲರೂ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಆರ್. ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಈ ಬಿಲ್ಲಿಗೆ ನನ್ನ ವಿರೋಧ ಇದೆ. ಅವರು ಪಾಸ್ ಮಾಡಿಕೊಳ್ಳಬಹುದು, ಮೆಜಾರಿಟಿ ಇದೆ ಎಂದು. ಆದರೆ ಮೂಲತಃ ಕಾಯ್ದೆಯಲ್ಲಿ ಏನು ಅವಕಾಶ ಇತ್ತು ಎಂದರೆ ಮ್ಯಾಕ್ಸಿಮಮ್ ಒಂದು ವರ್ಷ ಇರಬಹುದು ಎಂದು ಇತ್ತು. ಇವತ್ತು ಈ ಚುನಾವಣೆ ಆಗಬಾರದು,ಚುನಾವಣೆಯನ್ನು ಮುಂದೆ ಹಾಕಬೇಕು ಎಂದು ಹೊರಟಿದ್ದಾರೆ. ಚುನಾವಣೆ ಮಾಡುವುದಕ್ಕೆ ಯಾವ ಸಿದ್ಧತೆಯೂ ಇವರದ್ದು ಇಲ್ಲ. ಹಾಗಾಗಿ ಇವತ್ತು ಏನು ಮಾಡಿದ್ದಾರೆ. ಎಂದರೆ ಡೆಪ್ಯುಟಿ ಕಮಿಷನರಿಗೆ ಬ್ಲಾಂಕೆಟ್ ಪವರ್ ಕೊಟ್ಟಿದ್ದಾರೆ. ಜಿಲ್ಲಾಧಿಕಾರಿ ಮನಸ್ಸಿಗೆ ಬಂದ ಹಾಗೆ ಮುಂದೆ ಹಾಕಬಹುದು. , ಹತ್ತು ವರ್ಷವೂ ಅಲ್ಲಿ ಅಡ್ಮಿನಿಸ್ಟ್ರೇಟರ್ ಇರಬಹುದು. ಇವರು ನಿನ್ನೆ ಒಂದು ಮಸೂದೆಯನ್ನು ಪಾಸ್ ಮಾಡಿಕೊಂಡು ಹೋಗಿದ್ದಾರೆ. ಆ ಮನೆಯಲ್ಲಿ ಅದು ಪಾಸಾಗಿ ಅದಕ್ಕೆ ಅಸೆಂಟ್ ಬರುವತನಕ ನಿಮ್ಮ ಕಡೆ ಒಂದು ಬ್ಲಾಂಕೆಟ್ ಪವರ್ ಇದೆ. ನಾನು ನಿಮಗೆ ಇಷ್ಟೇ ಕಾಷನ್ ಇಲ್ಲಿ ಮಾಡುತ್ತಿದ್ದೇವೆ, ಇವತ್ತು ನೀವು ಅಡ್ಮಿನಿಸ್ಟ್ರೇಟರನ್ನು ಅಲ್ಲಿ ಹಾಕುವುದಕ್ಕೆ ಬ್ಲಾಂಕೆಟ್ ಪವರನ್ನು ತೆಗೆದುಕೊಂಡು ಹೋಗುತ್ತಿದ್ದೀರಿ. ಅದು ಸರಿಯಲ್ಲ. ಈ ರೀತಿಯ ಬಿಲ್ ತಂದು ನೀವು ಪ್ರಜಾಪ್ರಭುತ್ವದಲ್ಲಿ ಗದಾಪ್ರಹಾರ ಮಾಡುತ್ತಿದ್ದೀರಿ. ಚುನಾಯಿತ ಪ್ರತಿನಿಧಿಗಳ ಬಗ್ಗೆ ನಿಮಗೆ ವಿಶ್ವಾಸ ಇಲ್ಲ. ಹಾಗಾಗಿ ನಾನು ಈ ಬಿಲ್ಲನ್ನು ವಿರೋಧ ಮಾಡುತ್ತಾ ನಾನು ಈ ಬಿಲ್ಲನ್ನು ವಿರೋಧ ಮಾಡುತ್ತಾ ನಾನು ಇಷ್ಟೇ ಹೇಳುತ್ತೇನೆ, ಇದು ಒಂದು ನೆವ ಆಗಿ ಚುನಾವಣೆಯನ್ನು ಮುಂದಕ್ಕೆ ಹಾಕುವುದಕ್ಕೆ ಇದು ಒಂದು ಸರ್ಕಾರದ ತಂತ್ರ ಇದೆ. ಸರ್ಕಾರದ ಮೇಲೆ ನನ್ನ ಸ್ಪಷ್ಟವಾದ ಅಪಾದನೆ.

*ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೇ, ಸುಪ್ರೀಂ ಕೋರ್ಟ್ ತೀರ್ಮಾನವನ್ನು ಜಾರಿಗೆ ತರುತ್ತೇವೆ ಎಂದು ಈ ಸಭೆಯಲ್ಲಿ ಮಾತು

ಕೊಟ್ಟು ಜೂನ್ ಎಂಡ್ ಒಳಗೆ ಚುನಾವಣೆ ಮಾಡುತ್ತೇವೆ ಎಂದು ಏನು ಮುಖ್ಯಮಂತ್ರಿಗಳು ಹೇಳಿ, ಇವತ್ತು ಹಿಂದಿನ ಬಾಗಿಲಿಂದ ಈಗಿನ ಸ್ಥಿತಿಯನ್ನೇ ಮುಂದುವರೆಸುವುದಕ್ಕೆ ಹೊರಟಿದ್ದಾರೆ. ಇದು ಒಂದು ವರ್ಷದೊಳಗೆ ಚುನಾವಣೆಯು ಆಗಬೇಕು ಎಂದು ಇರುವ ಕಾಯ್ದೆಯನ್ನು ಅಮೆಂಡ್ ಮಾಡದೆ ಆರ್ಡಿನೆನ್ಸ್‌ಗಳನ್ನು ಫರ್ದರ್ ಪಾಸ್ ಮಾಡಿಕೊಳ್ಳುವುದು ಯಾವುದೇ ಸರ್ಕಾರಕ್ಕೆ ಗೌರವ ಘನತೆ ತರುವ ಕೆಲಸವಲ್ಲ. ಅಧ್ಯಕ್ಷರೇ, ನಿನ್ನೆ ತಾನೆ ಬಿಲ್ ಇಂಟ್ರಡ್ಯೂಸ್ ಆಗಿದೆ. ಇದನ್ನು ಫರ್ದರ್ ಏತಕ್ಕೆ ಅಮೆಂಡ್ ಮಾಡಬೇಕೋ ಗೊತ್ತಿಲ್ಲ. ಅವರು ತಕ್ಷಣ ಚುನಾವಣೆಗೆ ಹೋಗುವುದಕ್ಕೆ ತಾವು ಏನಾದರೂ ಮಾಡಬೇಕು ಎಂದು ಕೇಳಿಕೊಳ್ಳುತ್ತೇವೆ.

ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೇ, ಇವತ್ತು ಏನು ಈಗ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳಿಗೆ ಇರತಕ್ಕಂಥ ಆಡಳಿತಾಧಿಕಾರಿಗಳನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ, ಇದಕ್ಕೆ ಮೊದಲು ಇರತಕ್ಕಂಥ ಕಾನೂನಿನಲ್ಲಿ ಅವಕಾಶ ಇಲ್ಲ. ಆರು ತಿಂಗಳವರೆಗೆ ಮಾತ್ರ ಆಡಳಿತಾಧಿಕಾರಿ ಇರಬೇಕು, ನಂತರ ಚುನಾವಣೆಯನ್ನು ಮಾಡಬೇಕು ಎಂದು ಇದೆ. ಇವರು ನಿನ್ನೆ ಒಂದು ಕಾನೂನನ್ನು ಪಾಸ್ ಮಾಡಿಕೊಂಡಿದ್ದಾರೆ. ಅದು ಜಾರಿ ಆಗಬೇಕಾದರೆ ಇನ್ನೂ ಒಂದು ವರ್ಷ ಇದೆ. ನ್ಯಾಯಾಲಯದಲ್ಲಿ ಹೋಗಬಹುದು. ಇವರದು ಉದ್ದೇಶ ಇಷ್ಟೆ. ಜಿಲ್ಲಾಧಿಕಾರಿಗೆ ಅಧಿಕಾರವನ್ನು ಕೊಟ್ಟು ಈ ಜನರ ಪ್ರತಿನಿಧಿಗಳು ಇರತಕ್ಕಂಥ ಮಂಡಲಪಂಚಾಯಿತಿ, ಜಿಲ್ಲಾಪರಿಷತ್ತುಗಳನ್ನು ಅಧಿಕಾರಿಗಳ ಮುಖಾಂತರ ತಮ್ಮ ನಿಯಂತ್ರಣ ಇಟ್ಟುಕೊಳ್ಳಬೇಕೆಂಬ ಆ ದುರುದ್ದೇಶದಿಂದ ಇದನ್ನು ತಂದಿದ್ದಾರೆಯೇ ವಿನಹಾ ಇದು ಜನಪರವಾದ ಪ್ರಜಾಪ್ರಭುತ್ವದಲ್ಲಿ ಒಪ್ಪತಕ್ಕಂಥ ಒಂದು ತಿದ್ದುಪಡಿ ಇದಲ್ಲ. ಈ ಸರ್ಕಾರದವರು ಪ್ರಜಾಪ್ರಭುತ್ವದ ಬಗ್ಗೆ ಸಾಕಷ್ಟು ಹೇಳುತ್ತಿದ್ದಾರೆ. ಇವತ್ತು ಜನರ ಕೈಗೆ ಅಧಿಕಾರವನ್ನು ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಇದು ನಿಜವಾಗಿಯೂ ಇವರ ಮನಸ್ಸಿನಲ್ಲಿ ಇಲ್ಲ. ಈ ಒಂದು ಕಾಂಗ್ರೆಸ್‌ನ ಸಂಸ್ಕೃತಿ ಮತ್ತು ನೀತಿ ಏನಿದೆ ಎಂದರೆ ಅಧಿಕಾರ ಕೇಂದ್ರೀಕರಣ ಅವರ ಮೇಲೆ ಇರತಕ್ಕಂಥ ಹೈಕಮಾಂಡ್‌ನಲ್ಲಿ ಏನಿದೆ, ಎಲ್ಲಾ ಅಧಿಕಾರವನ್ನು ತಮ್ಮ ಕಡೆಗೆ ಇಟ್ಟುಕೊಳ್ಳುವಂಥ ಒಂದು ಕಾಂಗ್ರೇಸ್‌ನ ನೀತಿ ಅದನ್ನು ಇಲ್ಲಿ ಪ್ರತಿಬಿಂಬಿಸುತ್ತದೆ. ಈ ಒಂದು ತಿದ್ದುಪಡಿ ಎಂದು ಹೇಳಬಹುದು. ಇದು ಜನಪರವಾದುದು ಅಲ್ಲ. ಇದನ್ನು ಅನಿವಾರ್ಯವಾಗಿ ವಿರೋಧ ಮಾಡುತ್ತೇವೆ. ಅದು ಸಹಿತ ನಿರ್ದಿಷ್ಟ ಇಲ್ಲ. ಎಷ್ಟು ಕಾಲಾವಕಾಶ ಬೇಕಾದರೂ ಆಡಳಿತಾಧಿಕಾರಿಯನ್ನು ಇರಿಸುವುದಾದರೆ ಇವರಿಗೆ ಚುನಾವಣೆಯನ್ನು ಮಾಡುವಂಥ ಇಚ್ಛೆ ಇದೆಯೇ? ಹೊಸದಾಗಿ ಕಾನೂನನ್ನು ತರುವಂಥ ಇಚ್ಛೆ ಇದೆಯೇ? ಅಥವಾ ಜನರಿಗೆ ಅಧಿಕಾರ ಕೊಡುವಂಥ ಮನೋಭಾವನೆ ಇದೆಯೇ? ಕೇವಲ ತೋರಿಕೆಗಾಗಿ ನಿನ್ನೆ ತಂದಂಥ ಕಾನೂನನ್ನು ಪಾಸ್ ಮಾಡಿಕೊಂಡು ಅಧಿಕಾರಿಗಳ ಕೈಯಲ್ಲಿ, ತಮ್ಮ ಕೈಯಲ್ಲಿ ನಿಯಂತ್ರಣ ಇಟ್ಟುಕೊಳ್ಳುವುದಕ್ಕೆ ಅಧಿಕಾರ ಕೇಂದ್ರೀಕರಣ ಮಾಡುವುದಕ್ಕೆ ಈ ತಿದ್ದುಪಡಿ ತರುತ್ತಾರೆ ಎಂದು ಹೇಳಿ ನಾವು ಇದನ್ನು ವಿರೋಧ ಮಾಡುವುದು ಅನಿವಾರ್ಯವಾಗಿದೆ.

*ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ವಿಧೇಯಕವನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತಿದ್ದೇನೆ ಮತ್ತು

ವಿರೋಧ ಪಕ್ಷದ ನಾಯಕರು ನಾವೆಲ್ಲಾ ಸೇರಿ ಸ್ವಲ್ಪ ಇದರ ಬಗ್ಗೆ ವಿಶೇಷವಾಗಿ ಯೋಚನೆ ಮಾಡಬೇಕಿತ್ತು. ಏಕೆಂದರೆ ಇದು ಬಹಳ ಪ್ರಮುಖವಾಗಿರುವಂತಹ ಸಂಗತಿ. ತಾವು ನಿನ್ನೆ ಏನು ಜಿಲ್ಲಾ ಪರಿಷತ್ತು ಮಸೂದೆ ತಂದಿರಿ; ಅದಕ್ಕಿಂತ ಪ್ರಮುಖವಾದ ಸಂಗತಿ ಇದು. ನಿಮ್ಮ ಉದ್ದೇಶ ಇದರಲ್ಲಿ ಬಹಳ ಸ್ಪಷ್ಟವಾಗಿದೆ. ನಾನು ಹೇಳುತ್ತೇನೆ ಇವತ್ತು ಘಳಿಗೆ, ಸಮಯ ಹೊತ್ತು ಎಲ್ಲವನ್ನೂ ಮುಖ್ಯಮಂತ್ರಿಗಳು ಬರೆದುಕೊಳ್ಳಲಿ, ನಾವು ಸದನದಲ್ಲಿರುವವರು ಸಹ ಬರೆದುಕೊಳ್ಳುತ್ತೇವೆ. ನಿಶ್ಚಿತವಾಗಿ ಮುಂದೆ ಬರುವಂತಹ ವಿಧಾನಸಭಾ ಚುನಾವಣೆ ಆಗುವವರೆಗೆ ಯಾವುದೇ ಕಾರಣಕ್ಕೆ ಇವತ್ತು ನೀವು ಈ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯತಿ ಹೊಸ ಮಸೂದೆ ತಂದರೂ ಸಹ ಚುನಾವಣೆಯನ್ನು ನಡೆಸುವುದಿಲ್ಲ. ಏಕೆಂದು ಹೇಳಿದರೆ ಒಂದು ಕಡೆ ನಿಮಗೆ ಸುಪ್ರೀಂ ಕೋರ್ಟಿಗೋಸ್ಕರ ಹೊಸ ಮಸೂದೆಯನ್ನು ತಂದಿದ್ದೇವೆ ಎಂದು ಹೇಳಿ ಅವರಿಗೆ ತೋರಿಸುವುದಕ್ಕೋಸ್ಕರ ಬೇಕಿತ್ತು, ಪಾಸ್ ಮಾಡಿಕೊಂಡಿರಿ. ಇವತ್ತು ಅದು ಸ್ಟೇ ಆಗುತ್ತದೆ. ಇವತ್ತು ಜಿಲ್ಲಾಧಿಕಾರಿಗಳಿಗೆ ಪೂರ್ಣವಾದ ಒಂದು ಅಧಿಕಾರವನ್ನು ಕೊಡಲು ಇದನ್ನು ಮಾಡುವುದಕ್ಕೆ ಹೊರಟಿದ್ದೀರಿ. ಇವತ್ತು ಇದರ ಪರಿಣಾಮ ಏನು? ಆರು ತಿಂಗಳು, ವರ್ಷ, ಎರಡು ವರ್ಷ ಈ ತರಹ ಈಗಿರುವಂತಹ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗುವಂತಹ ಪ್ರಯತ್ನವನ್ನು ನೀವು ಮಾಡುತ್ತಿದ್ದೀರಿ. ನಾನು ಹೇಳುತ್ತೇನೆ, ನಿಶ್ಚಿತವಾಗಿ ಇವತ್ತು ಈ ಪ್ರಜಾತಂತ್ರದ ವ್ಯವಸ್ಥೆ ಬಗ್ಗೆ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ತಮಗೆ ಏನಾದರೂ ಕಳಕಳಿ ಇದ್ದಿದ್ದರೆ ಇವತ್ತು ಈ ಒಂದು ಪೂರ್ಣ ಪವರ್ಸ್‌ನ್ನು ಜಿಲ್ಲಾಧಿಕಾರಿಗಳಿಗೆ ಕೊಡುವುದಕ್ಕೆ ಹೋಗುತ್ತಿರಲಿಲ್ಲ. ನಿಮ್ಮ ಸರ್ಕಾರದ ಧೋರಣೆ ಸ್ಪಷ್ಟ ಇದೆ. ಇವತ್ತು ಜನರ ಮುಂದೆ ಚುನಾವಣೆಗೆ ಹೋಗುವುದಕ್ಕೆ ನೀವು ಸಿದ್ಧ ಇಲ್ಲ. ಇದಕ್ಕಾಗಿ ಹೇಗಾದರೂ ಮಾಡಿ ಈ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗಬೇಕು, ನೋಡಿ ಹೊಸ ಮಸೂದೆಯನ್ನು ತಂದಿದ್ದೇವೆ ಎಂದು ಜಗತ್ತಿಗೆ ಹೇಳಬೇಕು ಎಂದು ಇವತ್ತು ಈ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ನಿಮಗೆ ನಂಬಿಕೆ ಇಲ್ಲದೆ, ಅನೇಕ ನಿಮ್ಮ ಬೇರೆ ಬೇರೆ ಕಾರಣಗಳಿಗೋಸ್ಕರ, ಜನರನ್ನು ಎದುರಿಸುವುದಕ್ಕೆ ಆಗದೇ ಇರುವ ಈ ಕಾಲದಲ್ಲಿ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯತ್ ಚುನಾವಣೆ ನಡೆಸುವುದಕ್ಕೆ ಆಗದೇ ಇರುವಂತಹ ಈ ಕಾಲದಲ್ಲಿ ಹೇಗಾದರೂ ಮಾಡಿ ಅಡ್ಮಿನಿಸ್ಟ್ರೇಟರ್ ಅವರನ್ನು ಮುಂದುವರಿಸಿಕೊಂಡು ಹೋಗಬೇಕು ಎಂದು ಆ ಒಂದು ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಡುವುದಕ್ಕೆ ಹೊರಟಿದ್ದೀರಿ. ಹೀಗೆ ಅಕ್ಷಮ್ಯ ಅಪರಾಧವನ್ನು ತಾವು ಮಾಡುತ್ತಿದ್ದೀರಿ. ಅದಕ್ಕೋಸ್ಕರ ನಾನು ಹೇಳುವುದು, ದಯಮಾಡಿ ನಿಮ್ಮ ಉದ್ದೇಶವನ್ನು ಸ್ಪಷ್ಟ ಮಾಡಿ. ನಿಮ್ಮ ಬಿಲ್‌ನಲ್ಲಿ ಏನು ಇದೆ, ಅಮೆಂಡ್‌ಮೆಂಟ್‌ನಲ್ಲಿ ಏನು ಇದೆ ಇದು ಬಹಳ ಮುಖ್ಯವಲ್ಲ. ಇದು ಪಾಸಾಗಿದೆ ಎಲ್ಲಾ ಆಗಿ ಹೋಗಿದೆ. ಆದ್ದರಿಂದ ಇವತ್ತು ನಿಮ್ಮ ಉದ್ದೇಶ ಏನು? ಚುನಾವಣೆ ಮಾಡುತ್ತೀರಾ ಆರು ತಿಂಗಳಲ್ಲಿ ಇಲ್ಲವೇ ಮೂರು ತಿಂಗಳಲ್ಲಿ? ಏತಕ್ಕೋಸ್ಕರ ತಾವು ಹಿಂಬಾಗಿಲಿನಿಂದ ಅಧಿಕಾರವನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಶಡ್ಯಂತ್ರವನ್ನು ಮಾಡುತ್ತಿದ್ದೀರಿ ಎಂಬುದು ನನಗೆ ಏನೂ ಅರ್ಥ ಆಗುತ್ತಿಲ್ಲ. ಬಹುಶಃ ನಮ್ಮ ನಾಡಿನ ಜನ, ಗ್ರಾಮೀಣ ಜನ, ಈ ಒಂದು ನಿಮ್ಮ ನೀತಿಯನ್ನು ಒಪ್ಪುವುದಿಲ್ಲ ; ನಮ್ಮಲ್ಲಿ ಬಹುಶಃ ಜನ ನಿಮ್ಮನ್ನು ಕ್ಷಮಿಸುವುದಿಲ್ಲ ಎನ್ನುವಂತಹ ಎಚ್ಚರಿಕೆಯನ್ನು ಮಾತ್ರ ಈ ಸಂದರ್ಭದಲ್ಲಿ ಕೊಡುತ್ತೇನೆ. ಈಗಲಾದರೂ ಹೇಳಿ. ಇವತ್ತು ನಿಮಗೆ ಬೇಕಾದಂತಹ

ಎಲ್ಲಾ ಮಸೂದೆಗಳನ್ನು ಪಾಸು ಮಾಡಿಕೊಂಡಿರುವಂತಹ ಈ ಕಾಲದಲ್ಲಿ, ನಿಶ್ಚಿತವಾಗಿ ನಾವು ಇನ್ನು ಮೂರು ತಿಂಗಳೊಳಗೆ ಚುನಾವಣೆಯನ್ನು ನಡೆಸುತ್ತೇವೆ ಎಂದು ನೀವು ಏತಕ್ಕೆ ಹೇಳುವುದಿಲ್ಲ. ಮುಂದೆ ಬರುವಂತಹ ವಿಧಾನಸಭೆ ಚುನಾವಣೆಗೆ ಮುನ್ನ ಹಳ್ಳಿಯ ಜನರನ್ನು ಎದುರಿಸುವಂತಹ ಶಕ್ತಿ ನಿಮಗೆ ಇಲ್ಲ. ಅದಕ್ಕಾಗಿ ಇವತ್ತು ಏನೇನೋ ವಾಮ ಮಾರ್ಗವನ್ನು ಹುಡುಕುವಂಥ ಪ್ರಯತ್ನವನ್ನು ಮಾಡುತ್ತಿದ್ದೀರಿ. ಆದ್ದರಿಂದ ಇದನ್ನು ಸಂಪೂರ್ಣವಾಗಿ ನಾನು ವಿರೋಧ ಮಾಡುತ್ತಿದ್ದೇವೆ.

*ಶ್ರೀ ಸಿ. ಬೈರೇಗೌಡ (ವೇಮಗಲ್) : ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಇದು ಬಹಳ ಸಣ್ಣ ತಿದ್ದುಪಡಿ ಇದ್ದರೂ ಸಹ ಅದರ ಪರಿಣಾಮ ಬಹಳ ಮಹತ್ತರವಾಗಿದೆ. ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅದರ ಬುಡಕ್ಕೇ ಕೊಡಲಿ ಹಾಕತಕ್ಕಂಥ ಪ್ರಯತ್ನವನ್ನು ಈ ಒಂದು ಮಸೂದೆಯ ಮುಖಾಂತರ ತರುತ್ತಿದ್ದೀರಿ. ನಿನ್ನೆ ಒಪ್ಪಿಗೆ ಆದಂತಹ ಮಸೂದೆಯ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಸಿಗಲಿಲ್ಲ. ಆದ್ದರಿಂದ ಸ್ವಲ್ಪ ವೇಳೆಯನ್ನು ಹೆಚ್ಚಿಗೆ ಪಡೆದುಕೊಳ್ಳಬೇಕು ಎಂದು ಹೇಳಿ ತಮ್ಮ ಅಪ್ಪಣೆಯನ್ನು ಕೇಳುತ್ತೇನೆ. ಇವತ್ತು ಈ ಚುನಾವಣೆಗಳು ಮುಂದೆ ಹೋಗುತ್ತಾ ಹೋಗುತ್ತಾ, ಕಳೆದ ಸುಮಾರು ಒಂದು ಒಂದೂವರೆ ವರ್ಷದಿಂದ ಏನೂ ಕೆಲಸ ಆಗುತ್ತಾ ಇಲ್ಲ. ಜಿಲ್ಲಾ ಪರಿಷತ್ತುಗಳಲ್ಲಿ ಕೆಲಸ ಆಗುತ್ತಾ ಇಲ್ಲ. ಮಂಡಲ್ ಪಂಚಾಯತಿಯಲ್ಲಿ ಕೆಲಸ ಆಗುತ್ತಾ ಇಲ್ಲ. ಜವಾಹರ್ ರೋಜ್‌ಗಾರ್ ಯೋಜನೆಗೆ, ಹಣ ಬರುತ್ತಿದೆ. ಒಂದೊಂದು ಮಂಡಲ್ ಪಂಚಾಯತಿಗೆ ಮೂರು ಲಕ್ಷ, ನಾಲ್ಕು ಲಕ್ಷ, ಐದು ಲಕ್ಷ ಹಣ ಇವತ್ತಿನ ದಿವಸ ಬರುತ್ತಿದೆ. ಅದರಲ್ಲಿ ಇವತ್ತು ಮಾಡಿಸತಕ್ಕವರು ಅವರೇ. ಏನೋ ಮಂಡಲ್ ಪಂಚಾಯತಿ ಕಾರ್ಯದರ್ಶಿಗಳಾಗಿರತಕ್ಕಂಥವರು ಅಥವಾ ಆಡಳಿತಾಧಿಕಾರಿಗಳಾಗಿರತಕ್ಕಂಥವರು ಮಾಡಿಸುತ್ತಿದ್ದಾರೆ. ಇವತ್ತಿನ ದಿವಸ ಶೇಕಡಾ 60ರಿಂದ 70ರಷ್ಟು ಕೆಲಸ ಕೂಡ ಆಗುತ್ತಾ ಇಲ್ಲ. ಅನೇಕ ಕಡೆ ಕೆಲಸ ಇಲ್ಲದೇನೆ ಹಣವನ್ನು ಪಡೆದುಕೊಂಡಿರತಕ್ಕ ನಿದರ್ಶನಗಳು ಇದ್ದಾವೆ. ಕೆಲಸ ಇಲ್ಲದೆ ಹಣ ಖರ್ಚಾಗುತ್ತದೆ., ಹಣ ಪೋಲಾಗುತ್ತಿದೆ. ಅದು ಅಷ್ಟೇ ಅಲ್ಲದೆ ಇವತ್ತು ಬೀದಿದೀಪಗಳನ್ನು ಹಾಕತಕ್ಕಂಥವರು ಇಲ್ಲ. ಕುಡಿಯುವ ನೀರಿನ ವ್ಯವಸ್ಥೆ, ಯಾವ ಹಳ್ಳಿಯಲ್ಲೂ ಇವತ್ತಿನ ದಿವಸ ಸಮರ್ಪಕವಾಗಿಲ್ಲ. ಆ ಪಂಪುಗಳು ಸಹಾ ಕೆಟ್ಟು ಹೋಗಿರುತ್ತೇನೆ. ವರ್ಷದಲ್ಲಿ ಹನ್ನೆರುಡು ಬಾರಿ ದುರಸ್ತಿಯಾಗುತ್ತದೆ. ಒಂದೊಂದು ಸಲ ದುರಸ್ತಿಯಾಗಬೇಕಾದರೆ ಸಾವಿರಾರು ರೂಪಾಯಿಗಳು ಖರ್ಚಾಗಿರುತ್ತದೆ. ಇಷ್ಟು ಖರ್ಚಾಗಿದ್ದರೂ ಸಹ ಕೆಲವು ಸಲ ಅದು ದುರಸ್ತಿಯಾಗಿ ಜನರಿಗೆ ನೀರು ಸಿಗದಿರುವಂಥ ಪರಿಸ್ಥಿತಿ ಇರುತ್ತದೆ. ಇನ್ನು ಲೈಸನ್ಸ್‌ಗಳನ್ನು ಕೊಡತಕ್ಕಂಥ ವ್ಯವಹಾರದ ಬಗ್ಗೆ ಹೇಳಬೇಕಾದರೆ, ಇವೊತ್ತಿನ ದಿವಸ ರಾತ್ರೋರಾತ್ರಿ ಲೈಸನ್ಸ್‌ಗಳನ್ನು ಕೊಡುತ್ತಿದ್ದಾರೆ. ಸರ್ಕಾರಿ ಜಾಗಗಳಿಗೆ ಲೈಸನ್ಸ್ ಗಳನ್ನು ಕೊಡುತ್ತಿರತಕಂಥಾದ್ದು ಮತ್ತು ಆತನಿಗೆ ಜಾಗ ಇಲ್ಲದಿರೂ ಕೂಡ ಲೈಸನ್ಸ್‌ಗಳನ್ನು ಕೊಡತಕ್ಕಂಥಾದ್ದು ರಾಜಾರೋಷವಾಗಿ ನಡೆಯುತ್ತಿದೆ. ಅಲ್ಲದೆ, ಖಾತೆ ಬದಲಾವಣೆ ಮಾಡುವ ಬಹು ದೊಡ್ಡ ' ರ್‍ಯಾಕೆಟ್' ಇವೊತ್ತು ಅನೇಕ ಕಡೆ ನಡೆಯುತ್ತಿದೆ. ಖಾತೆ ಬದಲಾವಣೆ ಮಾಡುವುದಕ್ಕೆ ಇಂತಿಷ್ಟು ಹಣವೆಂದು ನಿಗದಿಪಡಿಸಿದ್ದಾರೆ. ಆಡಳಿತಾಧಿಕಾರಿಗಳನ್ನು ನೇಮಿಸಿದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರು ಪ್ರತಿನಿತ್ಯ ಹಿಂಸೆ ಅನುಭವಿಸುತ್ತಿದ್ದಾರೆ.

ನಮ್ಮ ಜಿಲ್ಲೆಯ ಜಿಲ್ಲಾ ಪರಿಷತ್ತಿಗೆ ಸಂಬಂಧಿಸಿದಂತೆ, ಚಿಕ್ಕ ಬಳ್ಳಾಪುರದ ಒಂದು ಡಿವಿಜನ್‌ನಲ್ಲಿ ಸುಮಾರು ಐದು ಕೋಟಿ ರೂಪಾಯಿಗಳಷ್ಟು ಹಣ ದುರುಪಯೋಗವಾಗಿದೆ. ಆ ಕುರಿತು ಇಲ್ಲಿ ವಿಚಾರ ಪ್ರಸ್ತಾಪಿಸಿದ್ದೇನೆ. ಇದರ ಬಗ್ಗೆ ತನಿಖೆಗಾಗಿ ಲೋಕಾಯುಕ್ತಕ್ಕೆ ವಹಿಸಲಾಗಿದೆಯೆಂಬ ಆಶ್ವಾಸನೆ ಸರ್ಕಾರದಿಂದ ಬಂತು. ಆದರೆ, ಇಲ್ಲಿಯವರೆವಿಗೂ ಕೂಡ ನಾವು ಮಾಡಿರತಕ್ಕಂಥ ಆರೋಪದಲ್ಲಿ ಸತ್ಯಾಂಶ ಇದೆಯೇ ಅಥವಾ ಇಲ್ಲವೇ ಎಂಬುದನ್ನಾದರೂ ಸರ್ಕಾರ ತಿಳಿಸಬೇಕಾಗಿತ್ತು; ಆದರೆ ಈವರೆಗೆ ತಿಳಿಸಿಲ್ಲ. ಒಂದು ಕಡೆ ಮಂಡಲ ಪಂಚಾಯತಿಗಳಲ್ಲಿ ಲಕ್ಷಾಂತರ ಹಣ ಲೂಟಿಯಾಗುತ್ತಿದ್ದರೆ ಮತ್ತೊಂದು ಕಡೆ ಜಿಲ್ಲಾ ಪರಿಷತ್‌ನಲ್ಲಿ ಕೋಟ್ಯಾಂತರ ರೂಪಾಯಿಗಳ ಲೂಟಿಯಾಗುತ್ತಿರುವುದರ ಬಗ್ಗೆ ಹೇಳುವವರು, ಕೇಳುವವರು ಯಾರೂ ಇಲ್ಲವೆನ್ನುವ ಪರಿಸ್ಥಿತಿಯಿದೆ. ಇನ್ನು ಸಾಮಾಜಿಕ ಅರಣ್ಯದ ಕಾರ್ಯಕ್ರಮ ಯಾವ ರೀತಿ ನಡೆಯುತ್ತಿದೆಯೆಂದು ನೋಡಬೇಕು. ನಾನು ವಿವರಗಳಿಗೆ ಹೋಗುವುದಿಲ್ಲ. ಸದನದಲ್ಲಿ ಮಂಡಿಸಿರುವುದು ಸಣ್ಣ ತಿದ್ದುಪಡಿಯಾಗಿರುವುದರಿಂದ ಇದರ ಬಗ್ಗೆ ನಾನು ಮಾತನಾಡುತ್ತಿಲ್ಲ. ಇವೊತ್ತು ಕೋಟ್ಯಾಂತರ ರೂಪಾಯಿ ಖರ್ಚಾಗಿದೆ. ಬೆಳೆದು ನಿಂತಿರುವ ಮರಗಳನ್ನು ರಾತ್ರೋರಾತ್ರಿ ಕಡಿದುಕೊಂಡು ಹಾಕುತ್ತಿದ್ದಾರೆ. ಈ ಬಗ್ಗೆ ಅದನ್ನು ಕೇಳುವವರ್ಯಾರೂ ಇಲ್ಲ. ಏಕೆಂದರೆ, ಇದರ ಉಸ್ತುವಾರಿ ನೋಡಿಕೊಳ್ಳುವುದಕ್ಕೆ ನೇಮಕ ಮಾಡುವ ಅಧಿಕಾರ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳಿಗಿಲ್ಲ. ಸಾಮಾಜಿಕ ಅರಣ್ಯಕ್ಕಾಗಿ ನಾವು ವಿಶ್ವಬ್ಯಾಂಕಿನಿಂದ ನೂರಾರು ಕೋಟಿ ರೂಪಾಯಿಗಳ ಹಣ ತಂದಿದ್ದೇವೆ. ಆ ಹಣ ಸಾಮಾಜಿಕ ಅರಣ್ಯ ಕಾರ್ಯಕ್ರಮಕ್ಕಾಗಿ ಖರ್ಚಾಗುತ್ತಿದೆ. ಈ ಯೋಜನೆಯಡಿ ಅಷ್ಟಿಷ್ಟು ಗಿಡ, ಮರಗಳು ಬೆಳೆದು ನಿಂತಿದೆ, ಆದರೆ ಅದನ್ನು ನೋಡಿಕೊಳ್ಳುವುದಕ್ಕೆ ಯಾರೂ ಇಲ್ಲ; ಬೆಳೆದಿರತಕ್ಕಂಥಾದ್ದು ಹಾಳಾಗುತ್ತಿದೆ, ಹಣ ಮಾತ್ರ ಖರ್ಚಾಗುತ್ತಿದೆ. ಇದು ಸಾಮಾಜಿಕ ಅರಣ್ಯವೇ? ವ್ಯವಸಾಯ ಇಲಾಖೆಗೆ ಸಂಬಂಧಿಸಿದಂತೆ, ನಮ್ಮ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನ ಮೂಲಕ ನಡೆಯುತ್ತಿರುವುದರ ಬಗ್ಗೆ ಹೇಳುತೇನೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ತತ್‌ಕ್ಷಣ ಚುನಾವಣೆ ನಡೆಸಬೇಕಾದಂಥ ಅವಶ್ಯಕತೆಯಿದೆ. ಅಂದರೆ, ಜನತಾ ಪ್ರತಿನಿಧಿಗಳು ಬಂದನಂತರ ಇವರು ಹರಿಶ್ಚಂದ್ರರು ಎನ್ನತಕ್ಕಂಥ ಸರ್ಟಿಫಿಕೇಟ್ ಅನ್ನು ಅವರಿಗೆ ಕೊಡುವುದಕ್ಕೆ ನಾನು ತಯಾರಿಲ್ಲ. ಈ ರೀತಿ ಅನೇಕ ಕಡೆ ಅಧಿಕಾರಿಗಳು ಶಾಮೀಲಾಗಿ ಲೂಟಿ ಮಾಡಿರುವ ಬಗ್ಗೆಯೂ ನಾನು ಹೇಳಿದೆ. ಆದರೆ, ಗುಡ್ಡೆಗಣ್ಣಿಗಿಂಥ ಮೆಳ್ಳಗಣ್ಣು ಮೇಲು ಎನ್ನತಕ್ಕಂಥ ಪರಿಸ್ಥಿತಿ ಇವೊತ್ತು ಬಂದಿದೆ. ಆದುದರಿಂದ, ಈ ಸಂಸ್ಥೆಗಳಿಗೆ ಚುನಾವಣೆಯನ್ನು ಅತಿ ಜಾಗ್ರತೆ ನಡೆಸಬೇಕಾದಂಥ ಅವಶ್ಯಕತೆಯಿದೆ; ಇದರಿಂದ ನಾವು ಸ್ವಲ್ಪಮಟ್ಟಿಗಾದರೂ ಸುಧಾರಣೆ ಕಾಣುತ್ತೇವೆ. ಬರೀ ಈ ರೀತಿಯ ನೆಪಗಳನ್ನೊಡ್ಡಿಕೊಂಡು ಚುನಾವಣೆಯನ್ನು ಮುಂದೆ ಹಾಕತಕ್ಕಂಥಾದ್ದು ಸರಿಯಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಇಷ್ಟು ಮಾತುಗಳನ್ನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಜಿಲ್ಲಾಪರಿಷತ್ ವಿಧೇಯಕವನ್ನು ಪ್ರಜಾಪ್ರಭುತ್ವಕ್ಕೆ ಒಂದು ರೀತಿಯ ಪುರಸ್ಕಾರ ಕೊಡುವ ದೃಷ್ಟಿಯಲ್ಲಿ ಜನ ಸಾಮಾನ್ಯರ ಕೈಗೆ ಅಧಿಕಾರ ಕೊಡುವ ರೂಪದಲ್ಲಿ

ತಂದದ್ದು ನೋಡಿ ನನಗೆ ತುಂಬಾ ಸಂತೋಷವಾಗಿತ್ತು. ನಾವು ಅದರ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿದ್ದೆವು. ನೀವು ನಿನ್ನೆ ಪ್ರಜಾಪ್ರಭುತ್ವಕೆ ಪುರಸ್ಕಾರ ಕೊಡುತ್ತೀರೆಂದು ನಾವು ಅಂದುಕೊಂಡಿದ್ದರೆ, ಇವೊತ್ತು ಅಧಿಕಾರಶಾಹಿಗೆ ಪುರಸ್ಕಾರ ಕೊಡುತ್ತಿದ್ದೀರಿ. ಈ ಮಸೂದೆಯನ್ನು ಸನ್ಮಾನ್ಯ ಗ್ರಾಮಿಣಾಭಿವೃದ್ಧಿ ಮಂತ್ರಿಗಳು ತಂದಾಗ ಆ ಬಗ್ಗೆ ನಾವು ಸ್ಪಷ್ಟವಾಗಿ ಹೇಳಿದೆವು; ರಾಜಕೀಯವಾಗಿ ಯೋಚನೆ ಮಾಡದೆ ನಾವು ಬೆಂಬಲ ಕೊಡುತ್ತಿದ್ದೇವೆ ಎಂದು ಏತಕ್ಕೆಂದರೆ, ಗ್ರಾಮಾಂತರ ಪ್ರದೇಶದ ಜನರಿಗೆ ಇವರು ಅಧಿಕಾರ ಕೊಡುತ್ತಾರೆಂದು. ಅಲ್ಲದೆ, ಪಕ್ಷಾತೀತವಾಗಿ ಯೋಚನೆ ಮಾಡುತ್ತೇವೆಂದು ಹೇಳಿದೆವು. ಇಂತಹ ಬೆಂಬಲ ಕೊಟ್ಟಂಥ ಸಂದರ್ಭದಲ್ಲಿ ನಿನ್ನೇ ತಾನೇ ನಾವು ಆನಂದದಿಂದ ಹೋದಾಗ ಇವೊತ್ತು ಒಂದು ಮಸೂದೆ ತರುತ್ತಿದ್ದೀರಲ್ಲಾ; ಇದರಿಂದ ಇವರಿಗೆ ನಾಚಿಕೆಯಾಗಬೇಕಲ್ಲ. ಇದನ್ನು ಇವೊತ್ತು ಇವರು ಮಂಡಿಸಬೇಕಾದರೆ ಇವರಿಗೇನೂ ಅನ್ನಿಸಲಿಲ್ಲವೇ? ಇವರಿಗೆ ಎಷ್ಟು ದಿವಸ ಬೇಕಾದರೂ ಸಮಯ ಕೊಡಬಹುದಂತೆ; ಏತಕ್ಕೆ? ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲದಿರತಕ್ಕ ಮಸೂದೆಯನ್ನು ತರುವುದಕ್ಕಾಗುತ್ತದೆಯೇ? ಇಲ್ಲದಿದ್ದರೆ, ನಮಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲ, ನಮಗೆ ಅಧಿಕಾರಶಾಹಿಯ ಅಪೇಕ್ಷೆಯಿದೆ, ಎಂದು ಇವರು ಸ್ಪಷ್ಟವಾಗಿ ಹೇಳಲಿ. ನಿನ್ನೆ ದಿವಸ ಆ ರೀತಿ ತಂದು, ಇವೊತ್ತು ಈ ರೀತಿ ತರುತ್ತಿರುವಂಥ ಈ ಸರ್ಕಾರದ ಧೋರಣೆ ನೋಡಿದರೆ ಇವರು ಯಾವ ದಿಕ್ಕಿನಲ್ಲಿ ಸಾಗುತ್ತಿದ್ದಾರೆಂದು ಜನರು ಅರ್ಥಮಾಡಿಕೊಳ್ಳುತ್ತಾರೆ. ಅದಕ್ಕೋಸ್ಕರ, ಈ ಮಸೂದೆಯಲ್ಲಿ ಪ್ರಜಾಪ್ರಭುತ್ವಕ್ಕೆ ತಿರಸ್ಕಾರ ಮೂಡಿ ಅಧಿಕಾರಶಾಹಿಗೆ ಪುರಸ್ಕಾರ ಕೊಡುತ್ತಿದ್ದಾರೆಂದು ಮಾತ್ರ ಹೇಳಿ, ನಾನು ಸರ್ಕಾರದ ಧೋರಣೆಯನ್ನು ಖಂಡಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ತಂದಿರುವಂಥ ಈ ಮಸೂದೆಯನ್ನು ವಿರೋಧಿಸುತ್ತಾ, ನಾನು ಒಂದು ಸಲಹೆಯನ್ನು ಕೊಡಬೇಕೆಂದಿದ್ದೇನೆ. ಆಡಳಿತಾಧಿಕಾರಿಗಳನ್ನು ನೇಮಿಸುವಾಗ ಅನುಭವವಿದ್ದವರನ್ನು ಮಾತ್ರ ನೇಮಿಸಬೇಕು. ಇವೊತ್ತು ನಮ್ಮ ಜಿಲ್ಲೆಗೆ ತಾವು ಆಡಳಿತಾಧಿಕಾರಿಯನ್ನಾಗಿ ಫಾರೆಸ್ಟ್ ರೇಂಜ್ ಆಫೀಸರ್, ದನದ ಡಾಕ್ಟರನ್ನು ನೇಮಿಸಿದ್ದೀರಿ. ಇವರನ್ನು ಆಡಳಿತಾಧಿಕಾರಿ ಎಂದು ನೇಮಿಸಿದರೆ, ಯಾವ ಪ್ರಕಾರ ಅಭಿವೃದ್ಧಿಯಾಗುತ್ತದೆಂದು ತಾವು ವಿಚಾರ ಮಾಡಬೇಕು. ಹೀಗಾಗಿ ಆ ಪಶುವೈದ್ಯರು ದವಾಖಾನೆಯನ್ನು ಸರಿಯಾಗಿ ನೋಡಿಕೊಳ್ಳುವುದಕ್ಕಾಗುವುದಿಲ್ಲ ಜೊತೆಗೆ ಅಭಿವೃದ್ಧಿ ಕೆಲಸ-ಕಾರ್ಯಗಳನ್ನು ನೋಡುವುದಕ್ಕೆ ಸಾಧ್ಯವಿಲ್ಲ. ಅಷ್ಟೇ ಅಲ್ಲ, ಆತ 35 ಕಿಲೋಮಿಟರ್‌ಗಳಷ್ಟು ದೂರ ಹೋಗಬೇಕಾಗಿದೆ. ಅಲ್ಲಿಗೆ ಹೋಗಿ ಆತ ಯಾವಾಗ ಬರಬೇಕು? ಏನು ಪ್ಲಾನ್ ಎಸ್ಟಿಮೇಟ್ ಮಾಡಬೇಕು? ಆದುದರಿಂದ, ತಾವು ಏನು ಆಡಳಿತಾಧಿಕಾರಿಯನ್ನು ನೇಮಿಸುತ್ತೀರಿ, ಆಗ ಕನಿಷ್ಟ ಪಕ್ಷ ಜ್ಯೂನಿಯರ್ ಇಂಜಿನಿಯರ್ ಅಥವಾ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರನು ನೇಮಿಸಬೇಕು. ಅಭಿವೃದ್ಧಿ ಬಗ್ಗೆ ಸಾಕಷ್ಟು ತಿಳಿದುಕೊಂಡಿದ್ದು, ಆ ಬಗ್ಗೆ ಆಸಕ್ತಿ ಇರುವಂತಹವರನ್ನು ಆಡಳಿತಾಧಿಕಾರಿಯಾಗಿ ನೇಮಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಡಾ॥ ವೈ. ನಾಗಪ್ಪ (ಹರಿಹರ) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಹೇಳುತ್ತಿರುವುದೇನೆಂದರೆ, 'ಮದುವೆಯಾದ ತಕ್ಷಣ ಮಕ್ಕಳನ್ನು ಹಡೆಯಿರಿ' ಎಂದು. ಒಂದು ಜಿಲ್ಲಾಪರಿಷತ್ ವ್ಯವಸ್ಥೆ, it was a premature child given birth by the then chief Minister Sri Ramakrishna Hegde. It has so many defects. We wanted to do some plastic surgery for it. So, it takes time. ಇವರು ಮಾಡಿದ ತಕ್ಷಣ ' ನೀವು ಎಲೆಕ್ಷನ್ ಮಾಡುವುದಿಲ್ಲ'ವೆಂದು ಪ್ರಜಾಪ್ರಭುತ್ವದಲ್ಲಿ ಇವರು It is a fascist force. ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುವುದಕ್ಕೆ ಬಿಜೆಪಿಗೆ ಏನು ಹಕ್ಕಿದೆ? ಇವರು ಬಾಯಲ್ಲಿ ಜಾತ್ಯಾತೀತ ರಾಷ್ಟ್ರವೆಂದು ಹೇಳುವುದು; ಆದರೆ ಮಾಡುವುದು ಬೇರೆ ಕೆಲಸ. ಅದನ್ನು ನಾವು ಮಾಡೇ ಮಾಡುತ್ತೇವೆ.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಮದುವೆಯಾದ ನಂತರ ಮಕ್ಕಳಾಗಬೇಕೆಂದು ನಾವು ಹೇಳುವುದು, ಇವರು ಮದುವೆಗೆ ಮುಂಚೆ ಮಕ್ಕಳಾಗಬೇಕೆಂದು ಬಯಸುತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ಪ್ರಶ್ನೆ ಏನೆಂದರೆ, ಮಂಡಲ ಪಂಚಾಯಿತಿಗಳ ಮತ್ತು ಜಿಲ್ಲಾ ಪರಿಷತ್ತುಗಳ ಅವಧಿ ಮುಗಿದು ಹೋಯಿತು. ನಾವು ಚುನಾವಣೆ ಮಾಡಬೇಕಾಗಿತ್ತು. ಚುನಾವಣೆ ಮಾಡುವುದಕ್ಕೆ ಸಂವಿಧಾನಕ್ಕೆ ತಿದ್ದುಪಡಿ ತಂದಿದ್ದರಿಂದ ಚುನಾವಣೆಯನ್ನು ಪುನಃ ಒಂದು ವರ್ಷಕ್ಕೆ ಮಾಡಿದರೆ ಸರ್ಕಾರಕ್ಕೆ ವಿಪರೀತ ಖರ್ಚಾಗುತ್ತದೆ. ಅದಕ್ಕೋಸ್ಕರ ಆದಷ್ಟು ಬೇಗ ಚುನಾವಣೆ ಮಾಡಬೇಕೆಂದು, ಬಹುಶಃ ಇಡೀ ದೇಶದಲ್ಲಿಯೇ ಪ್ರಥಮವಾಗಿ ಸಂವಿಧಾನದ ತಿದ್ದುಪಡಿ ಪ್ರಕಾರ ಈ ಜಿಲ್ಲಾ ಪರಿಷತ್ ಮಸೂದೆಯನ್ನು ತಾವು ಮಂಜೂರು ಮಾಡಿಕೊಟ್ಟಿದ್ದೀರಿ. ಇದಕ್ಕಾಗಿ ವಿಶೇಷ ಧನ್ಯವಾದಗಳು. ತಾವು ಈ ಮಸೂದೆಯನ್ನು ಮಂಜೂರು ಮಾಡಿಕೊಟ್ಟಿದ್ದರಿಂದ, ಮಾನ್ಯ ಯಡಿಯೂರಪ್ಪನವರಿಗೆ ಜಿಲ್ಲಾ ಪರಿಷತ್ ಮಸೂದೆಯ ಪ್ರಾಮುಖ್ಯತೆ ಗೊತ್ತಿದೆ. ಏಕೆಂದರೆ, ಇಲ್ಲಿಯವರೆಗೆ ಗ್ರಾಮಾಂತರ ಪ್ರದೇಶವೆಲ್ಲವೂ ನಮ್ಮ ಗುತ್ತಿಗೆಯೆಂದು ನಾವೆಲ್ಲರೂ ತಿಳಿದುಕೊಂಡಿದ್ದೆವು. ಈಗ ಸ್ವಲ್ಪ ಗ್ರಾಮಾಂತರ ಪ್ರದೇಶದ ಒಳ ಹೋಗುವುದಕ್ಕೆ ಪ್ರಯತ್ನ ಮಾಡಿದ್ದರಿಂದ ಅಲ್ಲಿಂದ ಹೊಸ ಬರುವುದು ಹೇಗೆಂದು ಇವರಿಗೆ ದಿಕ್ಕು ತೋಚುತ್ತಿಲ್ಲ. ಹಳ್ಳಿಯನ್ನು ಪ್ರವೇಶಿಸಿದ್ದಾರೆ, ಆದರೆ, ಹೊರಗೆ ಬರುವುದು ಹೇಗೆಂದು ಗೊತ್ತಾಗುತ್ತಿಲ್ಲ. ಹಿಂದೆ ಅವರಿಗೆ ಗ್ರಾಮ ಪಂಚಾಯತಿ, ಜಿಲ್ಲಾ ಪರಿಷತ್‌ನ ಮಹತ್ವ ಗೊತ್ತಿರಲಿಲ್ಲ; ಈಗ ಅದನ್ನೆಲ್ಲಾ ಸ್ವಲ್ಪಮಟ್ಟಿಗೆ ತಿಳಿದುಕೊಂಡಿದ್ದರಿಂದ, ಅವರು ಬೆಂಬಲ ಕೊಟ್ಟರೆ ಆಶ್ಚರ್ಯವೇನೂ ಇಲ್ಲ. ತಾವು ತಿಳಿದುಕೊಂಡದ್ದು ಜಾಸ್ತಿಯಾಯಿತು; ಅದರಿಂದಾಗಿ ಕೆಟ್ಟುಹೋದಿರಿ ಅಷ್ಟೆ;

ಶ್ರೀ ಬಿ. ಎಚ್. ಬನ್ನಿಕೋಡ್ : ನೀವು ನಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೀರಿ, ನಂಬಿಸುತ್ತೀರಿ. ಆದರೆ ಇವೊತ್ತು ಏನು ನಂಬಿಸುತ್ತೀರಿ, ಆ ನಂಬಿಕೆಯನ್ನು ಉಳಿಸಿಕೊಳ್ಳುತ್ತೀರಾ ಅನ್ನುವುದೇ ಒಂದು ಶಂಕೆಯಾಗಿದೆ.

ಶ್ರೀ ಎಂ. ವೀರಪ್ಪಮೊಯಿಲಿ : ಅವಧಿ ಮುಗಿದುಹೋಗಿದ್ದರಿಂದ, ಅವಧಿಯನ್ನು ವಿಸ್ತರಿಬೇಕೆಂಬ ವಾದ ಒಂದು ಕಡೆ ಇದೆ. ಆದರೆ, ಅವಧಿ ವಿಸ್ತರಣೆ ಮಾಡಿ ಏನು ಮಾಡುತ್ತೀರಿ? ಇವೊತ್ತಲ್ಲ ನಾಳೆ ಚುನಾವಣೆ ಮಾಡಲೇ ಬೇಕಾಗುತ್ತದೆ. ನಾವು ಚುನಾವಣೆ ಮಾಡುತ್ತೇವೆ. ತಾವುಗಳಿಲ್ಲರೂ ಸಹಕಾರ ಕೊಟ್ಟರೆ ಎಷ್ಟು ಜಾಗ್ರತೆ ಚುನಾವಣೆಯಾಗಬೇಕೋ, ಅಷ್ಟು ಜಾಗ್ರತೆ ಅದನ್ನು ಮಾಡುತ್ತೇವೆ. ಒಂದು ದಿವಸವೂ ತಡ ಮಾಡುವುದಿಲ್ಲ. It is an assurance that I can give to this House. ಆನಂತರ, ಈಗಾಗಲೇ ಆರ್ಡಿನೆನ್ಸ್ ಮಾಡಿದ್ದೇವೆ, ಅವಧಿ ಮುಗಿದುಹೋಗಿದೆ. ಈಗ ಇದನ್ನು ಮಾಡದಿದ್ದರೆ ಏನಾಗುತ್ತದೆಂದರೆ there is a vacuum. ಎಲೆಕ್ಟೆಡ್ ಮೆಂಬರ್ಸ್ ಇರುವುದಿಲ್ಲ, ಎಲೆಕ್ಟೆಡ್ ಪ್ರಧಾನರಿರುವುದಿಲ್ಲ. ಆಡಳಿತಗಾರರಿಲ್ಲದಿದ್ದರೆ ಆಗುವುದಿಲ್ಲ. ಹಳ್ಳಿಗಳಲ್ಲಿ ಯಾವುದೇ ಕೆಲಸವಾಗುವುದಿಲ್ಲ There will be anarchy and vaccum. ಅನಾರ್ಕಿ ಮತ್ತು ವ್ಯಾಕ್ಯೂಮ್ ಆಗಬೇಕೆಂಬ ಅಪೇಕ್ಷೆ ನಮ್ಮದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ : ತಮ್ಮಲ್ಲಿ ನಮ್ಮ ವಿನಂತಿಯೇನೆಂದರೆ, ತಾವು ನಿಶ್ಚಿತವಾಗಿ ಹೇಳಿ. 6 ತಿಂಗಳು 1 ವರ್ಷ ಇದುವರೆಗೂ ಅಧಿಕಾರ ಕೊಡುತ್ತೇವೆಂದು ಹೇಳಿ. ಇದರ ಪ್ರಕಾರ ಎಷ್ಟು ದಿವಸಗಳು ಬೇಕಾದರೂ ಇಲ್ಲಿ ಮುಂದುವರಿಸುವುದಕ್ಕೆ ಅವಕಾಶವಾಗುತ್ತದೆ ಅಷ್ಟೆ;

ಶ್ರೀ ಆರ್. ವಿ. ದೇಶಪಾಂಡೆ : ಮ್ಯಾಕ್ಸಿಮಮ್ ಪೀರಿಯಡ್ ಒಂದು ವರ್ಷ ನಾವು ಅದಕ್ಕೆ ಇಲ್ಲಿ ಅಮೆಂಡ್‌ಮೆಂಟ್ ತಂದು ಡಿ.ಸಿ.ಗೆ maximum period one year ಎಂದು ಎರಡು ರೀತಿಯ ಅಧಿಕಾರ ಕೊಟ್ಟೆವು. ಇದು ತಪ್ಪು. He can extend and curtail, the Deputy Commissioner can go for two years also. You have given blanket power. If you have brought it to one year, I can understand. This is the point I said.

ಶ್ರೀ ಎಂ. ವೀರಪ್ಪ ಮೊಯಿಲಿ : ಇದರ ಉಪಯೋಗ ಎಷ್ಟು ಸಮಯ ಇರುತ್ತದೆ? ಆ ಮಸೂದೆ ಹೇಗೂ ಪಾಸಾಗಿದೆ. ಒಂದು ತಿಂಗಳ ಒಳಗೆ ಅದು ಕಾನೂನಾಗಿ ಬರುತ್ತದೆ. ಆದ್ದರಿಂದ ಇದು ಒನ್ ಟೈಂ ಆಗುತ್ತದೆ. ಇದು ಮಿರತಕ್ಕಂತಹ ಪ್ರಶ್ನೆ ಇಲ್ಲ. ಒಂದು ತಿಂಗಳ ಮೇಲೆ ಇದರ ಆಯಸ್ಸು ಮುಗಿಯುತ್ತದೆ. ಟಿಲ್ ಎಲೆಕ್ಷನ್ ಇದು ಉಳಿಯುತ್ತದೆ. ಆಮೇಲೆ ಬಿಲ್ ರಿಪೀಲ್ ಆಗುತ್ತದೆ. I am not telling you not even a single day I will postpone than what is necessary . I will go on record. This is a promise on the floor of the House. ಆದ್ದರಿಂದ ಅದು wait and see ಅಲ್ಲ; we are going to have it. I am anxious to go.

ಶ್ರೀ ಕೆ. ಎಸ್. ಈಶ್ವರಪ್ಪ : ಕನ್ನಡದಲ್ಲಿ ಹೇಳುವುದನ್ನು ಬಿಟ್ಟು ಇವರು ವೈಟ್ ಅಂಡ್ ಸೀ ಎರಡು ಇಂಗ್ಲೀಷಿನಲ್ಲಿ ಹೇಳುತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ : ಕನ್ನಡದ್ದು ಪ್ರತ್ಯೇಕವಾದ ಹೇಳಿಕೆ ಇದೆ. ಅವರಿಗೆ ಬಹಳ ಸಂತೋಷವಾಗುತ್ತದೆ. ಮೊನ್ನೆ ಥಾಂಕ್ಸ್ ಎಂದು ಮೂರು ಸಾರಿ ಹೇಳಿದರು; ಈಗ ನೂರು ಸಾರಿ ಆ ರೀತಿ ಹೇಳಬೇಕು ಆ ರೀತಿಯಾಗಿ ಕನ್ನಡದ ಬಗ್ಗೆ ಹೇಳಿಕೆ ಕೊಡುತ್ತೇನೆ. ಸುಗ್ರೀವಾಜ್ಞೆ ಬಂದಿದೆ; ನಂತರ ಇದನ್ನು ಮಸೂದೆಯನ್ನಾಗಿ ಮಾರ್ಪಾಡು ಮಾಡಬೇಕಾಗುತ್ತದೆ. ಇದು ಸೀಮಿತವಾಗಿರತಕ್ಕಂಥಾದ್ದು. ಮುಂದೆ ಇದನ್ನು ವಿಸ್ತರಿಸಬಹುದು; ಅದನ್ನು ನಾನು ಒಪ್ಪುತ್ತೇನೆ. ಆಡಳಿತಾಧಿಕಾರಿಗಳಿಗಿಂತ, ಯಾವ ಪಕ್ಷದವರೇ ಇರಲೀ ನಮ್ಮ ಚುನಾಯಿತ ಪ್ರತಿನಿಧಿಗಳೇ ಮೇಲು ಎಂಬ ತತ್ವವನ್ನು ನಾನು ಒಪ್ಪುತ್ತೇನೆ. ಆದರೆ, ಮುಂದೆ ಬರತಕ್ಕಂತಹ ದಿವಸಗಳಲ್ಲಿ ಇದನ್ನು ಖಂಡಿತವಾಗಿ ಅನುಷ್ಠಾನ ಮಾಡುತ್ತೇವೆ. ಈ ರೀತಿಯ ಆಶ್ವಾಸನೆ ಸ್ವೀಕಾರ ಮಾಡಿ ತಾವು ದಯವಿಟ್ಟು ಇದನ್ನು ಸ್ವೀಕಾರ ಮಾಡಿ ಮಂಜೂರಾತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ '1993ರ ಕರ್ನಾಟಕ ಜಿಲ್ಲಾ ಪರಿಷತ್ತುಗಳ ತಾಲ್ಲೂಕು ಪಂಚಾಯತಿ ಸಮಿತಿಗಳು ಮಂಡಲ ಪಂಚಾಯತಿಗಳ ಮತ್ತು ನ್ಯಾಯ ಪಂಚಾಯತಿಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.'

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

<u>ಖಂಡ 2 ಮತ್ತು 3</u>

ಅಧ್ಯಕ್ಷರು : ''ಖಂಡ 2 ಮತ್ತು 3 ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.''

<u>(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)</u>

(ಖಂಡ 2 ಮತ್ತು 3, ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

<u>ಖಂಡ 1 ಇತ್ಯಾದಿ</u>

ಅಧ್ಯಕ್ಷರು : ಪ್ರಸ್ತಾವವೇನೆಂದರೆ '' ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

<u>(ಪ್ರಸ್ತಾಪವನ್ನು ಅಂಗೀಕರಿಸಲಾಯಿತು)</u>

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) : ''1993ರ ಕರ್ನಾಟಕ ಜಿಲ್ಲಾ ಪರಿಷತ್ತುಗಳ, ತಾಲ್ಲೂಕು ಪಂಚಾಯತಿ ಸಮಿತಿಗಳು, ಮಂಡಲ ಪಂಚಾಯತಿಗಳ ಮತ್ತು ನ್ಯಾಯ ಪಂಚಾಯತಿಗಳ (ತಿದ್ದುಪಡಿ) ವಿಧೇಯಕವನ್ನು'' ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವವೇನೆಂದರೆ ''1993ರ ಕರ್ನಾಟಕ ಜಿಲ್ಲಾ ಪರಿಷತ್ತುಗಳ ತಾಲ್ಲೂಕು ಪಂಚಾಯತಿ ಸಮಿತಿಗಳು, ಮಂಡಲ ಪಂಚಾಯತಿಗಳ ಮತ್ತು ನ್ಯಾಯ ಪಂಚಾಯತಿಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಪ್ರಕಟಣೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 114ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರ ಪಡೆದ 1993ನೇ ಸಾಲಿನ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿ ವಿಧೇಯಕವನ್ನು, ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ 7-4-93ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ.

4.25 ಪಿ.ಎಂ

ವಿಷಯ : ಕರ್ನಾಟಕ ರಾಜ್ಯದಲ್ಲಿ ಗ್ರಾನೈಟ್ ಕಲ್ಲುಗಣಿ ಮಾಡುವ ಮತ್ತು ಸಂಸ್ಕರಿಸುವ ಬಗ್ಗೆ .

ಸಚಿವರ ಹೇಳಿಕೆ

ಶ್ರೀ ಡಿ. ಎ. ಚಿನ್ನಪ್ಪ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳಿಗೆ ಈಗಾಗಲೇ ತಿಳಿದಿರುವಂತೆ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಮಾನ್ಯ ಮಂತ್ರಿಗಳು ಯಾವುದರ ಬಗ್ಗೆ ಹೇಳಿಕೆ ಕೊಡುತ್ತಿದ್ದಾರೆ, ನಾವು ಯಾವಾಗ ಇದರ ಬಗ್ಗೆ ಚರ್ಚೆಮಾಡಿದ್ದೇವೆ, ನಮಗೆ ಇದರ ಬಗ್ಗೆ ಏನೂ ಗೊತ್ತಿಲ್ಲ. ತಾವೇ ಸ್ವತಃ ಈ ಹೇಳಿಕೆಯನ್ನು ಕೊಡುತ್ತಿದ್ದೀರಾ? ನೀವೇನಾದರೂ ರಾಷ್ಟ್ರೀಕರಣ ಮಾಡಿದ್ದೀರಾ?

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಇದು ನಮಗೆ ಅರ್ಥವಾಗುತ್ತಿಲ್ಲ. ಹೊಸ ನೀತಿಯನ್ನು ನಿರೂಪಿಸಲು ಸರ್ಕಾರ ಒಂದು ಸದನ ಜಂಟಿ ಸಮಿತಿಯನ್ನು

ರಚನೆ ಮಾಡಿದ್ದೇವೆ ಎಂದು ಹೇಳುತ್ತಿದ್ದೀರಿ. ಹಾಗಾದರೆ ಆ ಸದನದ ಸಮಿತಿಗೆ ಏನು ಕೆಲಸವಿದೆ?

ಶ್ರೀ ವಾಟಾಳ್ ನಾಗರಾಜ್ : ಸರ್ಕಾರ ಸದನದ ಸಮಿತಿಯನ್ನು ಏನು ಮಾಡಿದೆ. ಅದಕ್ಕೆ ಏನಾದರೂ ಗೌರವ ಇದೆಯೇ? ನಾವು ಅದರಲ್ಲಿ ಸದಸ್ಯರಾಗಿದ್ದೇವೆ. ಸದನದ ಸಮಿತಿಯಲ್ಲಿ ಒಂದು ರೀತಿ ತೀರ್ಮಾನವಾಗುತ್ತಿದೆ, ಇನ್ನೊಂದುಕಡೆ ತಮ್ಮ ಮನಸ್ಸಿಗೆ ಬಂದ ರೀತಿಯಲ್ಲಿ ತಮ್ಮ ಒಂದು ನೀತಿಯನ್ನು ಹೇಳುತ್ತಿದ್ದೀರಿ.

ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳಿಗೆ ಈಗಾಗಲೇ ತಿಳಿದಿರುವಂತೆ ರಾಜ್ಯದಲ್ಲಿರುವ ಗ್ರಾನೈಟ್ ನಿಕ್ಷೇಪಗಳನ್ನು ಕಲ್ಲುಗಣಿ ಮಾಡಿ ಹೊರತೆಗೆದು ಸಂಸ್ಕರಿಸಿ ರಫ್ತು ಮಾಡುವ ಮತ್ತು ಅದರ ಬೆಳವಣಿಗೆಯನ್ನು ಕ್ರಮಗೊಳಿಸಿ ವೃದ್ಧಿಗೊಳಿಸುವ ಬಗ್ಗೆ ಸರ್ಕಾರವು ಮಾಡಿದ ಎಲ್ಲಾ ಪ್ರಯತ್ನಗಳು ಒಂದಲ್ಲಾ ಒಂದು ಕಾನೂನು ತೊಡಕಿನಲ್ಲಿ ಸಿಕ್ಕಿಬಿದ್ದಿವೆ. ಜೊತೆಗೆ ಗ್ರಾನೈಟ್ ಡಿಮ್ಮಿಗಳ ಅನಧಿಕೃತ ಕಲ್ಲು ಗಣಿಗಾರಿಕೆ ಹಾಗೂ ಅನಧಿಕೃತ ಸಾಗಾಣಿಕೆ ಇವುಗಳ ಬಗ್ಗೆ ಕೆಲವು ಟೀಕೆಗಳು ಆಗ್ಗಾಗೆ ಬಂದಿವೆ. ನಮ್ಮ ಸರ್ಕಾರ, ಇತ್ತೀಚೆಗೆ ಹಲವಾರು ಕ್ರಮಗಳನ್ನು ಈ ದಿಸೆಯಲ್ಲಿ ತೆಗೆದುಕೊಂಡು ಅನಧಿಕೃತ ಕಲ್ಲು ಗಣಿಗಾರಿಕೆ ಮತ್ತು ಸಾಗಾಣಿಕೆಯ ಮೇಲೆ ಪರಿಣಾಮಕಾರಿಯಾಗಿ ನಿಯಂತ್ರಣ ಸಾಧಿಸಿದೆ ಎಂದು ತಿಳಿಸಲು ಸಂತೋಷಿಸುತ್ತೇನೆ. ಸರ್ಕಾರ ಎಲ್ಲಾ ಉಪ ಖನಿಜ ನಿಕ್ಷೇಪಗಳನ್ನು ಸರಿಯಾದ ರೀತಿಯಲ್ಲಿ ಬಳಸಲು ಒಂದು ಸಮಂಜಸವಾದ ನೀತಿಯನ್ನು ರೂಪಿಸಿ ಸರ್ಕಾರಕ್ಕೆ ಸಲಹೆ ನೀಡಲು ಈಗಾಗಲೇ ಎರಡೂ ಸದನದ ಒಂದು ಜಂಟಿ ಸಮಿತಿಯನ್ನು ದಿನಾಂಕ 24-10-91 ರಂದು ಸರ್ಕಾರವು ರಚಿಸಿದೆ. ಈ ಸದನ ಸಮಿತಿಯು ತಮ್ಮ ಮಧ್ಯಕಾಲಿಕ ವರದಿಯನ್ನು ಸಲ್ಲಿಸಿದ್ದು ಅದರಲ್ಲಿರುವ ಸಲಹೆಗಳನ್ನು ಸರ್ಕಾರವು ಈಗಾಗಲೇ ಕಾರ್ಯರೂಪಕ್ಕೆ ತಂದಿದೆ. ಆದರೆ ಈ ಸಮಿತಿಯು ಇನ್ನು ತನ್ನ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ.

ಸಂಸ್ಕರಿಸಿದ ಗ್ರಾನೈಟ್ ಶಿಲೆಗಳನ್ನು ರಫ್ತು ಮಾಡುವ ಉದ್ದೇಶದಿಂದ ಅದರ ಸಂಬಂಧ ಕೈಗಾರಿಕೆ ಬಗ್ಗೆ ಕೇಂದ್ರ ಸರ್ಕಾರವು ಒಂದು ಎಕ್ಸ್‌ಪ್ಟ್ರೀಮ್ ಫೋಕಸ್ ಗ್ರೂಪ್ ಎಂಬ ಸಮಿತಿಗೆ ಒಪ್ಪಿಸಿದೆ. ರಾಜ್ಯದಲ್ಲಿರುವ ಗ್ರಾನೈಟ್ ಸಂಪತ್ತನ್ನು ಗಣನೆಗೆ ತೆಗೆದುಕೊಂಡು ಹಾಗೂ ಈ ಶಿಲೆಗೆ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿರುವ ಬೇಡಿಕೆಯನ್ನು ಅದರಲ್ಲಿಯೂ ಸಂಸ್ಕರಣೆ ಮಾಡಿದ ಗ್ರಾನೈಟ್‌ಗೆ ಇರುವ ಬೆಲೆಯನ್ನು ಆಧರಿಸಿ ಎಲ್ಲಾ ದೃಷ್ಟಿಯಿಂದಲೂ ಸಮಗ್ರವಾಗಿ ಪರಿಶೀಲಿಸಿದ ಮೇಲೆ ಒಂದು ಹೊಸ ಗ್ರಾನೈಟ್ ಗಣಿಗಾರಿಕೆಯ ನೀತಿಯನ್ನು ಈಗ ಸರ್ಕಾರವು ರೂಪಿಸಿರುವುದನ್ನು ನಾನು ತಿಳಿಸಲು ಹರ್ಷಿಸುತ್ತೇನೆ. ಈ ನೀತಿಯಲ್ಲಿನ ಮುಖ್ಯ ಉದ್ದೇಶವೇನೆಂದರೆ, ಸಂಸ್ಕರಣೆ ಮಾಡಿದ ಗ್ರಾನೈಟ್ ಶಿಲೆಗಳನ್ನೇ ರಫ್ತು ಮಾಡುವುದು. ಅದಕ್ಕೆ ಹೆಚ್ಚಿನ ಬೆಲೆ ಮತ್ತು ಅದರಿಂದ ದೇಶಕ್ಕೆ ಹೆಚ್ಚು ವಿದೇಶೀನಿಮಯಗಳಿಸುವ ಉದ್ದೇಶವೇ ಆಗಿದೆ. ಇದನ್ನು ಸಾಧಿಸಲು ಕಲ್ಲು ಗಣಿ ಗುತ್ತಿಗೆಗಳಿಗೆ ನೀಡುವ ಅವಧಿಯ ಸಾಕಷ್ಟು ಜಾಸ್ತಿ ಕಾಲಾವಕಾಶ ಇರಬೇಕಾಗುತ್ತದೆ. ಹಾಗೂ ಇದೇ ಸಮಯದಲ್ಲಿ ಶಾಸನ ಮತ್ತು ಸ್ಥಿರ